ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರಾದ ಸಗೀರ್ ಅಹ್ಮದರವರು ಬಹಳ ಪ್ರಾಮಾಣಿಕವಾದ ಸಲಹೆಯನ್ನು ಕೊಟ್ಟಿರುವುದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಅಲ್ಲಿ ಮಾನ್ಯ ಅಸಿಸ್ಟೆಂಟ್ ಕಮೀಷನರ್‌ರವರು ಏನು ಕ್ರಮ ಕೈಗೊಂಡಿದ್ದಾರೆ ಇದು ಒಂದು ರೀತಿಯಲ್ಲಿ ಉರಿಯುತ್ತಿರುವ ಬೆಂಕಿಗೆ ಎಣ್ಣೆಯನ್ನು ಸುರಿದಂತಾಗಿದೆ. ಇದು ಅಧಿಕಾರಿ ಆದವನು ಮಾಡುವಂಥ ಕ್ರಮ ಅಲ್ಲ. ಆ ಅಧಿಕಾರಿಗೆ ಯಾವರೀತಿಯಲ್ಲಿ ಈ ಸಲಹೆ ಬಂತು ಎಂಬುದು ಬೇಕು. ಏಕೆಂದರೆ ಉಪ ವಿಭಾಗಾಧಿಕಾರಿ ಎಂದರೆ ಒಂದು ರೀತಿಯಲ್ಲಿ ನ್ಯಾಯಾಧೀಶರಾಗಿರುತ್ತಾರೆ. ಇಂಥ ಕ್ರಮವನ್ನು ಅವರು ಏನು ಕೊಂಡಿದ್ದಾರೆ ಇಂಥಾದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಇಲ್ಲ. ಕಾನೂನು ಪ್ರಕಾರ ಯಾರು ಶಿಕ್ಷೆಯನ್ನು ಅನುಭವಿಸಬೇಕೋ ಅನುಭವಿಸಲಿ. ಯಾರು ಅನ್ಯಾಯ ಮಾಡಿದ್ದಾರೆ, ಯಾರು ಗಲಭೆ ಮಾಡಿದ್ದಾರೆ ಅವರಿಗೆ ಏನು ಬೇಕಾದರೂ ಶಿಕ್ಷೆ ಕೊಡಲಿ. ಆದರೆ ಈ ಪ್ರಕರಣಕ್ಕೆ ಸಂಬಂಧಿದಂತೆ ಸರ್ಕಾರ ತನ್ನ ನೀತಿಯನ್ನು ಸ್ಪಷ್ಟಪಡಿಸಬೇಕು.

ಉಪಾಧ್ಯಕ್ಷರು : ಇವತ್ತು ಇದರ ಬಗ್ಗೆ ಸಂಪೂರ್ಣವಾದ ಚರ್ಚೆ ಮಾಡೋಣ. ಯಾರ್ಯಾರು ಏನೇನು ಮಾತನಾಡುತ್ತೀರೋ ಮಾತನಾಡಿ. ಸರ್ಕಾರದ ಇದರ ಬಗ್ಗೆ ಉತ್ತರ ಕೊಡುವುದು ಏನೂ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಸಚಿವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ಇದರ ಬಗ್ಗೆ ಸ್ಪಷ್ಟ ಉತ್ತರವನ್ನು ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗ್ಡೆ : ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ಸರ್ಕಾರದ ಉತ್ತರ ಏನು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿ.ಜೆ.ಪಿ. ಕಾರ್ಯಕರ್ತರನ್ನು ಈ ರೀತಿ ಸದೆಬಡಿಯಬೇಕೆಂದು ಏನಾದರೂ ಈ ಕೆಲಸವನ್ನು ಮಾಡಿಸಿದ್ದೀರೋ?

(ಗೊಂದಲ)

(ಈ ಹಂತದಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರೊಬ್ಬರನ್ನು ಬಿಟ್ಟು ಉಳಿದ ಎಲ್ಲ ಬಿ.ಜೆ.ಪಿ. ಸದಸ್ಯರೂ ಮಾನ್ಯ ಸಭಾಧ್ಯಕ್ಷರ ಮುಂದಿರುವ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು).

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಕ್ಷಮೆ ಕೇಳಬೇಕು. ನಾವು ಏನು ಬೇಕಾದರೂ ಮಾಡಬಹುದು ಎಂದು ತಿಳಿದುಕೊಂಡಿದ್ದಾರೆಯೇ? ಮುಸ್ಲಿಮರಿಂದ ಜಾಮೀನು ಕೊಡುವಂತೆ ಕೇಳಿ ಮುಂದೆ ಬರುತ್ತಿರುವ ಚುನಾವಣೆ ಸಂದರ್ಭದಲ್ಲಿ ವಿಷ ಬೀಜವನ್ನು ಬಿತ್ತುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರೋ ನಿಮಗೆ ಬೇಕಾದಂಥ ಅಧಿಕಾರಿ ತನ್ನ ಮನಸ್ಸಿಗೆ